ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ 2021-22ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ... ಪುಟದ ಸಂಖ್ಯೆ - 01 -

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ: ಬಿ.ಬಿ.ಎಂ.ಪಿ 2021-22ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 05-330405 ರಡಿ ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆದಡಿ ಕೈಗೊಳ್ಳುವ ಕಾಮಗಾರಿಗಳಿಗೆ ಜಾಬ್ ಸಂಕೇತ ನೀಡುವ ಬಗ್ಗೆ.

ಉಲ್ಲೇಖ:

1. ಶ್ರೀ.ಬಿ.ಎಸ್.ಯಡಿಯೂರಪ್ಪ ರವರು ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ರವರ ಟಿಪ್ಪಣಿ ಸಂಖ್ಯೆ ಮು.ಮಂ/ಗೃ.ಕ/429/2021 ದಿನಾಂಕ: 20-07-2021.
2. ಶ್ರೀ.ಎಸ್.ಆರ್.ವಿಶ್ವನಾಥ್ ರವರು ಮಾನ್ಯ ಶಾಸಕರು ಯಲಹಂಕ ವಿಧಾನ ಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರ ಪತ್ರ ದಿನಾಂಕ: 02-08-2021.

* * * * *

1) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2021-22ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 05-330405 ರಡಿ ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆ ಅನುದಾನದ ಪಿ-3075ರಡಿ ಒಟ್ಟು ರೂ.250.00 ಕೋಟಿಗಳ ಅನುದಾನ ಮೀಸಲಿಟ್ಟಿದ್ದು, ಉಲ್ಲೇಖ ಪತ್ರ (1)ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸರ್ಕಾರ ಅನುಮೋದನೆಯಂತೆ ಯಲಹಂಕ ವಿಧಾನ ಸಭಾ ಕ್ಷೇತ್ರಕ್ಕೆ ರೂ.12.00 ಕೋಟಿಗಳ ಅನುದಾನ ಮಂಜೂರು ಮಾಡಿರುತ್ತಾರೆ.

2) ಹಾಗೂ ಮಾನ್ಯ ಶಾಸಕರು ಯಲಹಂಕ ವಿಧಾನ ಸಭಾ ಕ್ಷೇತ್ರರವರು ಉಲ್ಲೇಖ ಪತ್ರ(2)ರಲ್ಲಿ ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರಿಗೆ ಪತ್ರ ಬರೆದು ಈ ಕೆಳಕಂಡ ಕಾಮಗಾರಿಗಳಿಗೆ ಜಾಬ್ ಸಂಕೇತ ನೀಡಲು ಕೋರಿರುತ್ತಾರೆ. ಆದುದರಿಂದ ಸದರಿ ಅನುದಾನದಲ್ಲಿ ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಯಲಹಂಕ ವಲಯದ ವಾರ್ಡ್ ನಂ-01,02,03 & 04 ರಲ್ಲಿ ಮೂಲಭೂತ ಸೌಕಾರ್ಯ, ಶಾಲಾ ಕಟ್ಟಡ ನಿರ್ಮಾಣ, ಉದ್ಯಾನವನಗಳ ಅಭಿವೃದ್ಧಿ, ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಮಂಜೂರಾಗಿರುವ ರೂ.12.00 ಕೋಟಿಗಳ ಅನುದಾನಕ್ಕೆ ಸಂಬಂದಿಸಿದಂತೆ ಕ್ರೀಯಾ ಯೋಜನೆ ತಯಾರಿಸಲಾಗಿರುತ್ತದೆ. ಸದರಿ ಕ್ರೀಯಾ ಯೋಜನೆಯಲ್ಲಿನ ಕಾಮಗಾರಿಗಳನ್ನು ಅನುಷ್ಟಾನಗೊಳಿಸಲು ಜಾಬ್ ಸಂಕೇತ ಅವಶ್ಯಕವಾಗಿದ್ದು, ಈ ಕೆಳಕಂಡ ಕಾಮಗಾರಿಗಳಿಗೆ ಜಾಬ್ ಸಂಕೇತ ನೀಡಲು ಹಾಗೂ ಕ್ರೀಯಾ ಯೋಜನೆ ಅನುಮೋದಿಸಲು ಹಾಗೂ ಸದರಿ ಪ್ಯಾಕೇಜ್ ಟೆಂಡರ್ ಆಹ್ವಾನಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆಧೇಶಕ್ಕಾಗಿ ಮಂಡಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Additional works to public toilet at NES circle in Yelahanka Upnagara Ward no:04 ಪುಟದ ಸಂಖ್ಯೆ – 01 –

ಕಡತದ ಸಂಖ್ಯೆ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:– Additional works to public toilet at NES circle in Yelahanka Upnagara Ward no:04

*****

1) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ–04, ಯಲಹಂಕ ಉಪನಗರ ವ್ಯಾಪ್ತಿಯಲ್ಲಿ Additional works to public toilet at NES circle in Yelahanka Upnagara Ward no:04 ಕಾಮಗಾರಿಯನ್ನು ನಿರ್ವಹಿಸಲು ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮನವಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಸದರಿ ಕಾಮಗಾರಿಯನ್ನು **ESCROW ಅನುದಾನದಡಿಯಲ್ಲಿ** ಸೇರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಿರುತ್ತಾರೆ.

2) ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು **2020–21ನೇ ಸಾಲಿನ ESCROW ಅನುದಾನದಡಿಯಲ್ಲಿ** ರೂ.30.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ C.S.R of 2018-2019, PWD Electrical 2019-20, PRED 2019-20, SE-RDED approved Rate and issued Rates ನಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

3)
1. ಶಿಥಿಲವಾದ ಕಟ್ಟಡವನ್ನು ತೆರವುಗೊಳಿಸುವುದು.
2. ತೆರವುಗೊಳಿಸಿದ ಕಟ್ಟಡದ ಸಾಮಾಗ್ರಿಗಳನ್ನು ಹೊರಸಾಗಿಸುವುದು.
3. ಅಡಿಪಾಯಕ್ಕಾಗಿ ಮಣ್ಣಿನ ಅಗೆತ
4. ಸಿ.ಸಿ.1:4:8 ನ್ನು ಅಳವಡಿಸುವುದು
5. ಸಿ.ಸಿ.ಎಂ.20.ಓ.ಪಿ.ಸಿ.ಯನ್ನು ಅಳವಡಿಸುವುದು.
6. ಸೆಂಟರಿಂಗ್ ಮತ್ತು ಶೆಟ್ಟರಿಂಗ್‌ನ್ನು ಅಳವಡಿಸುವುದು.
7. ಸಿ.ಸಿ.ಎಂ.25 ಯನ್ನು ಅಳವಡಿಸುವುದು.
8. ಟಿ.ಎಂ.ಟಿ.ಸ್ಟೀಲ್‌ನ್ನು ಅಳವಡಿಸುವುದು.
9. ಪೈಯಿಂಟಿಂಗ್‌ನ್ನು ಬಳಿಯುವುದು
10. ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನು ನೀಡುವುದು ಇತ್ಯಾದಿ..,

4) ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಆದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ **2020–21ನೇ ಸಾಲಿನ ESCROW ಅನುದಾನದಡಿಯಲ್ಲಿ** ರಂತೆ ಕಾಮಗಾರಿಯ ಸಂಕೇತ:_____ ದೊರೆತಿದ್ದು ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳ ಬೇಕಾಗಿರುವುದರಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸ.ಅ (ವಾರ್ಡ್–ನಂ:04)

ಸಹಾಯಕ ಕಾರ್ಯಪಾಲನಾ ಅಭಿಯಂತರರು
ಯಲಹಂಕ ಉಪನಗರ ಉಪವಿಭಾಗ.
ಬ.ಬ.ಎ.ಪಿ. ಬೆಂಗಳೂರು-106

ಪೃ.ತಿ.ಸೋ

ವಿಷಯ :

ಪುಟದ ಸಂಖ್ಯೆ ..... 02 .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (01) ರಿಂದ (04)ರಲ್ಲಿ ವಿವರಿಸಿರುವಂತೆ 2020-21ನೇ ಸಾಲಿನ ESCROW ಅನುದಾನದಡಿಯಲ್ಲಿ "Additional works to Public Toilet at NES Circle in Yelahanka upanagara ward No 04" ಎಂಬ ಕಾಮಗಾರಿಯನ್ನು ಕೈಗೊಳ್ಳಲು ರೂ.30.00ಲಕ್ಷಗಳಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ CSR ದರಪಟ್ಟಿ ಹಾಗೂ PWD Electrical, 2019-20, PRED , 2019-20 SE-RDED and Approved Rate and issued Rates ದರಪಟ್ಟಿಯನ್ನು ಅನುಸರಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪ ವಿಭಾಗ ರವರು ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1)ಪಿ.ಆರ್/394/2020-21 ದಿನಾಂಕ:04-02-2021 ರಂತೆ ನೀಡಿರುವ ಅಧಿಕಾರದನ್ವಯ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಹಾಗೂ ಡಿ.ಟಿ.ಎಸ್. ಅನುಮೋದನೆ ನೀಡಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(04) ಮುಖ್ಯ ಅಭಿಯಂತರರು (ಯ.ವ)

ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ವಯ ತಮ್ಮ ಅವಗಾಹನೆಗೆ ತರುತ್ತಾ, 2021-22ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ POW ಕಾರ್ಯಕ್ರಮದಡಿ ವಾರ್ಡ್‌ವಾರು ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಮಂಜೂರಾಗಿದ್ದು, ಅದರಂತೆ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಮಾನ್ಯ ಆಡಳಿತಗಾರರು, ಬೃ.ಬೆಂ.ಮ.ಪಾ. ರವರಿಗೆ ಸಲ್ಲಿಸಲಾಗಿದ್ದು, ಅದರಂತೆ ವಾರ್ಡ್ ಸಂಖ್ಯೆ:04ರಲ್ಲಿ Additional works to public toilet at NES circle in Yelahanka Upanagara ward no-04 ಕಾಮಗಾರಿಗೆ ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ ದರಪಟ್ಟಿ 2018-19 ರಂತೆ ಅಂದಾಜು ಪಟ್ಟಿಯನ್ನು ರೂ.30.00ಲಕ್ಷಗಳಿಗೆ ತಯಾರಿಸಿ ಆಡಳಿತಾತ್ಮಕ, ತಾಂತ್ರಿಕ ಮಂಜೂರಾಗಿ ಹಾಗೂ ಡಿಟಿಎಸ್ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮಾನ್ಯ ಮುಖ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಆ/ಪಿ.ಆರ್/93/2021-22, ದಿನಾಂಕ:06-07-2021ರ ಆದೇಶದಲ್ಲಿ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವ ವ್ಯವಸ್ಥೆಯನ್ನು ಬಿಬಿಎಂಪಿ ಅನುದಾನಗಳಿಗೆ ಆಯಾ ವಲಯ ಮುಖ್ಯ ಅಭಿಯಂತರರ ಕಛೇರಿಯಲ್ಲಿ ಹಾಗೂ ಸರ್ಕಾರದ ಅನುದಾನಗಳಿಗೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಅನುಮೋದಿತ ಕ್ರಿಯಾಯೋಜನೆಯಂತೆ ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ನಿರ್ವಹಣೆ ಪೂರ್ಣ ಛಾಯಾಚಿತ್ರಗಳೊಂದಿಗೆ ಅನ್ವಯವಾಗುವ ನಿರ್ವಹಣೆ ಕಾಮಗಾರಿಗಳಿಗೆ ರಸ್ತೆ ಇತಿಹಾಸ, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಗಳನ್ನು ಪೂರೈಸಿ ಟೆಂಡರ್ ಅಂತಿಮಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ

ಮುಂದುವರೆದು, ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: ಬಿ12(1)ಪಿಆರ್/394/2020-21, ದಿನಾಂಕ:04-02-2021ರಲ್ಲಿ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಆಡಳಿತಾತ್ಮಕ, ತಾಂತ್ರಿಕ ಮಂಜೂರಾಗಿ ಹಾಗೂ ಡಿಟಿಎಸ್ ಅನುಮೋದನೆ ನೀಡಲು ಮೇಮೋ ತಯಾರಿಸಿ ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

(ಯ) ಕ ಮು. ಪ (ಯವ)

ಮುಖ್ಯ ಅಭಿಯಂತರರು
ಯಲಹಂಕ ವಲಯ

ವಿಷಯ :

ಪುಟದ ಸಂಖ್ಯೆ -12-

ಕಡತದ ಸಂಖ್ಯೆ

ಪಂಕ್ತಿಯ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು	
	4	ಅನುದಾನದ ಯೋಜನೆ ಹೆಸರು	2021-22 ನೇ ಸಾಲಿನ ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಯಡಿಯಲ್ಲಿ
	5	ಲಕ್ಷಣಿರ್ಷಿಕೆ	-
	6	ಆಡಳಿತಾತ್ಮಕ ಅನುಮೋದನೆ	ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರಿಂದ ಪಡೆಯಲಾಗಿದೆ.
	7	ತಾಂತ್ರಿಕ ಮಂಜೂರಾತಿ ಮೊತ್ತ	ರೂ.300.00 ಲಕ್ಷಗಳು
	8	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ ಬ್ಯಬೆಂ.ಮ.ಪಾ/ಮು.ಅ/ ತಾ.ಮಂ/ ಯ.ವ./ಪ.ಆರ್/64/2021-22 ರಂತೆ
	9	ಟೆಂಡರ್‌ಗೆ ಇಟ್ಟ ಮೊತ್ತ	ರೂ. 26.76 ಲಕ್ಷಗಳು
	10	ಟೆಂಡರ್‌ನ ಪೂರ್ವ ಭಾವಿ ಸಭೆ	27-12-2021ರಂದು ಸಂಜೆ 3.00 ಗಂಟೆಗೆ.
	11	ಆನ್ ಲೈನ್ ಇ-ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	03-01-2022 upto 16.00 hrs
	12	ಆನ್ ಲೈನ್ ಇ - ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	04-01-2022 after 16.00 hrs

(11) ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ದಿನಾಂಕ:04-01-2022 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1) Sri. N LOKANADHA REDDY
2) Sri TULASIRAM REDDY

(12) ಮೇಲ್ಕಂಡ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, Sri N LOKANADHA REDDY & Sri TULASIRAM REDDY ಇಬ್ಬರು ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸಿರುವ ಕಾಮಗಾರಿ ದೃಢೀಕರಣ ಪತ್ರ, ಬ್ಯಾಂಕ್ ಗ್ಯಾರಂಟಿ, ಟರ್ನ್‌ಓವರ್ ಸರ್ಟಿಫೀಕೇಟ್ ಹಾಗೂ ಇತರೆ ಅವಶ್ಯಕವಾಗಿರುವ ಎಲ್ಲಾ ದಾಖಲಾತಿಗಳನ್ನು ಸಂಬಂಧಪಟ್ಟ ಕಛೇರಿಗಳಿಂದ ದೃಢೀಕರಿಸಿಕೊಳ್ಳಲಾಗಿದೆ. KW-4 Standard Tender Document ಅನುಸಾರ ನಿಗದಿಪಡಿಸಿರುವ ಎಲ್ಲಾ ಷರತ್ತುಗಳಂತೆ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುತ್ತಾರೆ. ತಾಂತ್ರಿಕ ಮೌಲ್ಯಮಾಪನದ ವಿವರಗಳು ಮತ್ತು ತುಲನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ.

(13) ಮೇಲಿನ ವಿವರಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ Sri N LOKANADHA REDDY & Sri TULASIRAM REDDY ರವರ ತಾಂತ್ರಿಕ ಬಿಡ್‌ನ್ನು ಅನುಮೋದಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(14) ಮುಖ್ಯ ಅಭಿಯಂತರರು (ಯಲಹಂಕ ವಲಯ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮು. ಅ (ಯಲ) / ಮುಖ್ಯ ಅಭಿಯಂತರರು
ಯಲಹಂಕ ವಲಯ

ವಿಷಯ .....

ಪಂಕ್ತಿಯ ಸಂಖ್ಯೆ	ಕಾ.ಮಾ
(15)	ಯ ಉ ನಿ

ಟಿಪ್ಪಣಿ ಹಾಳೆ

ಪುಟದ ಸಂಖ್ಯೆ -13-

ಕಡತದ ಸಂಖ್ಯೆ

ಕಾ.ಪಾ.ಅ[ಯ.ವಿ] ಟಿಪ್ಪಣಿಗಳು ಮತ್ತು ಆಜ್ಞೆಗಳು

ಯಲಹಂಕ ವಿಭಾಗದ ವ್ಯಾಪ್ತಿಯ ವಾರ್ಡ್‌ಸಂಖ್ಯೆ: 04ರಲ್ಲಿ 2021-22ನೇ ಸಾಲಿನ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನೆಯಡಿ ಮಂಜೂರಾಗಿರುವ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸಲು ಒಟ್ಟು ಅಂದಾಜು ಮೊತ್ತ ರೂ.30.00 ಲಕ್ಷಗಳಿಗೆ ದಿನಾಂಕ:15-12-2021 ರಂದು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಗುತ್ತಿಗೆದಾರರಾದ Sri. N LOKANADHA REDDY & Sri TULASIRAM REDDY ರವರು ಭಾಗವಹಿಸಿ ಟೆಂಡರ್‌ನಲ್ಲಿ ನಿಗಧಿಪಡಿಸಿದ ಷರತ್ತುಗಳಂತೆ ಅರ್ಹ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್‌ಅನ್ನು ಅನುಮೋದಿಸಿ ಆರ್ಥಿಕ ಬಿಡ್‌ಅನ್ನು ತೆರೆಯಲು ಮುಖ್ಯ ಅಭಿಯಂತರರು ಯಲಹಂಕ ವಲಯರವರು ಕಂಡಿಕೆ( )ರಲ್ಲಿ ಅನುಮೋದನೆ ನೀಡಿರುತ್ತಾರೆ. ಅದರಂತೆ ತಾಂತ್ರಿಕವಾಗಿ ಅರ್ಹರಾಗಿರುವ ಇಬ್ಬರೂ ಬಿಡ್ದುದಾರರ ಆರ್ಥಿಕ ಬಿಡ್‌ಅನ್ನು ತೆರೆಯಲಾಗಿದ್ದು,

ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018-19ನೇ ಸಾಲಿನ ಅನುಮೋದಿತ ದರಗಳಿಗೆ ಹೊಲಿಸಿದಾಗ	ಗುತ್ತಿಗೆ ದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಧರಗಳಿಗೆ ಹೋಲಿಸಿದಾಗ ಶೇಕಡ ವಾರು	ಪರಾ
01	N LOKANADHA REDDY	2676194.55	2809390.15	(+)4.98% ಹೆಚ್ಚು	
02	TULASIRAM REDDY		2865462.88	(+)7.07% ಹೆಚ್ಚು	

ಮೇಲ್ಕಂಡ ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ Sri. N LOKANADHA REDDY ರವರು ನಮೂದಿಸಿರುವ **ರೂ.28,09,390.15ಗಳು** ಅತಿ ಕಡಿಮೆ ದರಗಳಾಗಿರುತ್ತದೆ.

ಆದುದರಿಂದ ಗುತ್ತಿಗೆದಾರರಾದ Sri. N LOKANADHA REDDY ರವರು ನಮೂದಿಸಿರುವ **ರೂ.28,09,390.15ಗಳು** ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018-19 ಸಾಲಿನ ದರಗಳಿಗೆ ತುಲನೆ ಮಾಡಿದಾಗ ಶೇಕಡ (+)4.98%ರಷ್ಟು ಹೆಚ್ಚು ದರಗಳನ್ನು ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಅರ್ಹ ಗುತ್ತಿಗೆದಾರರಾದ Sri. N LOKANADHA REDDY ರವರು ನಮೂದಿಸಿರುವ ದರ **ರೂ.28,09,390.15ಗಳನ್ನು** ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ (+)4.98%ರಷ್ಟು ಕಡಿಮೆ ದರಗಳಾಗಿದ್ದು ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

18/01/2022

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಪತ್ರಕ್ಕೆ ಅಂಕಿತಗಳಿಗೆ ದಿನ ಸಂಖ್ಯಾನ ನಡೆಸಿ ಮಂಡಿಸಿ

18/1/22

(19) ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ)

ಕಂಡಿಕೆ (18) ರಲ್ಲಿ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಎಲ್-1 ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲು ಸೂಚಿಸಿರುವ ಮೇರೆಗೆ ದಿನಾಂಕ: 18/01/2022 ರಂದು ಗುತ್ತಿಗೆದಾರರಿಗೆ ತಿಳುವಳಿಕೆ ಪತ್ರವನ್ನು ನೀಡಲಾಗಿರುತ್ತದೆ. ಅದರಂತೆ ಗುತ್ತಿಗೆದಾರರು ದಿನಾಂಕ: 18/01/2022 ರಂದು ಈ ಕಛೇರಿಗೆ ಪತ್ರ ನೀಡಿ 2018-19 ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಅನುಮೋದಿತ ದರಗಳ ಟೆಂಡರ್ ಮೊತ್ತಕ್ಕೆ ಶೇಕಡ (+) 4.90% ರಷ್ಟು ಹೆಚ್ಚಿನ ದರಗಳಿಗೆ ಕಾಮಗಾರಿ ನಿರ್ವಹಿಸಲು ಒಪ್ಪಿರುತ್ತಾರೆ. ವಿವರ ಈ ಕೆಳಕಂಡಂತಿರುತ್ತದೆ.

ಗುತ್ತಿಗೆದಾರರ ಹೆಸರು	Before Negotiation			After Negotiation
	ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್‌ದರಗಳಿಗೆ ಹೋಲಿಸಿದಾಗ ಶೇಕಡ ವಾರು	ದರ ಸಂದಾನದ ನಂತರ ಗುತ್ತಿಗೆದಾರರು ನಮೂದಿಸಿರುವ ದರಗಳು	2018-19ನೇ ಸಾಲಿನ ಎಸ್.ಆರ್‌ದರಗಳಿಗೆ ಹೋಲಿಸಿದಾಗ ಶೇಕಡ ವಾರು
N LOKANADHA REDDY,	2809390.15	(+)4.98% ಹೆಚ್ಚು	2807328.08	(+)4.90%

(20) ಈ ಮೇಲ್ಕಂಡ ವಿವರಗಳಂತೆ ಗುತ್ತಿಗೆದಾರರು N LOKANADHA REDDY ರವರು ನಮೂದಿಸಿರುವ ದರಸಂದಾನದ ಮೊತ್ತವಾದ ರೂ.28,07,328.08ಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

27/01/2022

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(21) ಮುಖ್ಯ ಅಭಿಯಂತರರು (ಯಲಹಂಕ ವಲಯ)

ಕಾರ್ಯಪಾಲಕ ಅಭಿಯಂತರರು (ಯಲಹಂಕ)ರವರ ವರದಿಯಂತೆ ಸದರಿ ಕಾಮಗಾರಿಗೆ ದಿನಾಂಕ:04-01-2022ರಂದು ಟೆಂಡರ್ ತೆರೆಯಲಾಗಿದ್ದು, ತಾಂತ್ರಿಕ ಮೌಲ್ಯ ಮಾಪನದಲ್ಲಿ ಇಬ್ಬರು ಬಿಡ್‌ದಾರರಾದ 1)SRI.N.LOKANADHA REDDY. 2)Sri.TULASIRAM REDDYರವರು ಭಾಗವಹಿಸಿದ್ದು,SRI.N.LOKANADHA REDDY.ರವರು ನಮೂದಿಸಿರುವ ಮೊತ್ತ ರೂ.28,09,390.15 ಗಳಾಗಿದ್ದು, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡಾವಾರು(+)4.98%ರಷ್ಟು ಹೆಚ್ಚು ದರಗಳಾಗಿರುತ್ತದೆ. ದಿನಾಂಕ:18-01-2022ರಂದು ದರಸಂದಾನ ನಡೆಸಲಾಗಿ ಸದರಿಯವರು ರೂ.28,07,328.08ಗಳಿಗೆ ಕಾಮಗಾರಿ ನಿರ್ವಹಿಸುವುದಾಗಿ ಒಪ್ಪಿದ್ದು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ(+)4.90%ಹೆಚ್ಚುವರಿ ದರಗಳಾಗಿದ್ದು, ಸಂಧಾನಿತ ದರಗಳಿಗೆ ಅನುಮೋದನೆ ನೀಡಲು ಕೋರಿರುವುದರಿಂದ ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

(22) ಮು.ಲ(ಯವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಕೆಸಿಎಂಸಿ)